ಬಾಳಲು ನನಗೆ ಸಾಧ್ಯವಿಲ್ಲ' ಎಂದು ಪತ್ರ ಬರೆದಿಟ್ಟು. ಸಂಜನಾ ನಡುಗಿಹೋದಳು. ಮುಂದಿನ ದಿನಗಳಲ್ಲಿ ಸರಿಹೋಗುತ್ತಾನೆ ಎಂದುಕೊಂಡಿದ್ದ ಸಂಜನಾಗೆ ಇದು ಅನಿರೀಕ್ಷಿತ.

ಶಶಿಧರನ ಮೊಬೈಲ್‌ಗೆ ದಿನವಿಡೀ ಕಾಲ್ ಮಾಡಿದರೂ ಸ್ವಿಚ್ ಆಫ್ ಎಂದೇ ಮಾರುತ್ತರ ಬರುತ್ತಿತ್ತು. ಅವನು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ ವಿಚಾರಿಸಿದಳು ಸಂಜನಾ. ಅವನು ಕೆಲಸಕ್ಕೆ ರಾಜೀನಾಮೆ ನೀಡಿ ಅದಾಗಲೇ ಹದಿನೈದು ದಿನಗಳಾದವು ಎಂಬ ಉತ್ತರ ಬಂತು. ಅವನ ಸಹೋದ್ಯೋಗಿಗಳನ್ನು, ಸ್ನೇಹಿತರನ್ನು ವಿಚಾರಿಸಿದಳು. ಅವನು ಎಲ್ಲಿ ಹೋಗಿದ್ದಾನೆ, ಏನು ಮಾಡುತ್ತಿದ್ದಾನೆ ಎಂದು ಯಾರಿಗೂ ತಿಳಿದಿರಲಿಲ್ಲ. ಯಾವ ಸುಳಿವೂ ಕೊಡದೇ ಶಶಿಧರ ಕಾಣೆಯಾಗಿದ್ದ.

ಕ್ಷಣಕಾಲ ಕಂಗಾಲಾದ ಸಂಜನಾ ಸ್ವಲ್ಪ ದಿನಗಳಲ್ಲೇ ಸುಧಾರಿಸಿಕೊಂಡಳು. ಆದರೆ ಕೋಪ, ಅಸಹನೆ ತುಂಬಿಕೊಂಡಿತು. ಶಶಿಧರನ ಬಗ್ಗೆ ದ್ವೇಷ ಹುಟ್ಟಿಕೊಂಡಿತು. ಅವನಿಲ್ಲದೆ ತಾನೂ ಬದುಕಬಲ್ಲೆ ಎಂಬುದನ್ನು ಸಾಧಿಸಿ ತೋರಿಸಬೇಕು ಎಂದು ನಿರ್ಧರಿಸಿ ಚಂದನಾಳೊಂದಿಗೆ ಬೆಂಗಳೂರು ಬಸ್ಸು ಹತ್ತಿದಳು.

ಸ್ನೇಹಿತೆಯೊಬ್ಬಳ ನೆರವಿನಿಂದ ಬೆಂಗಳೂರಿನಲ್ಲಿ ಕಾಲಿರಿಸುವಂತಾಯ್ತು. ಸಹೋದ್ಯೋಗಿ ನಂದಿತಾ ಸಂಜನಾಳಿಗೆ ಆಸರೆ ನೀಡಿದಳು. ಕಂಕುಳಲ್ಲಿ ಮಗುವನ್ನಿಟ್ಟುಕೊಂಡು ಬಂದಿದ್ದ ಸಂಜನಾಳಿಗೆ ಎಲ್ಲಾ ರೀತಿಯ ಸಹಾಯ ಮಾಡಿದಳು. ಶಿಶು ಪಾಲನಾ ಕೇಂದ್ರದಲ್ಲಿ ಮಗು ಬಿಟ್ಟು ಕೆಲಸಕ್ಕೆ ಹೋಗುವುದು, ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಪುನಃ ಕರೆದುಕೊಂಡು ಹೋಗುವುದು ಸಂಜನಾಳ ದಿನಚರಿಯಾಯ್ತು. ಮಗಳು ಬೆಳೆಯುತ್ತಾ ಬೆಳೆಯುತ್ತಾ ವರುಷಗಳು ಉರುಳಿದ್ದೇ ಸಂಜನಾಳ ಅರಿವಿಗೆ ಬರಲಿಲ್ಲ. ಆರು ವರ್ಷಗಳು ಸರಿದು ಹೋಗಿದ್ದವು. ಆಗಾಗ ಶಶಿಧರನ ನೆನಪಾಗುತ್ತಿದ್ದರೂ ಮಗಳ ಆಟಪಾಠಗಳಲ್ಲಿ ಭಾಗಿಯಾಗಿ ನೋವನ್ನು ಮರೆಯತೊಡಗಿದಳು.

ಇನ್ನು ಶಶಿಧರನ ನೆನಪು ಅರ್ಥವಿಲ್ಲದ್ದು; ಅವನನ್ನು ಪೂರ್ತಿಯಾಗಿ ಮರೆತುಬಿಡಬೇಕು ಎಂದು ಭಾವಿಸುತ್ತಿರುವಾಗಲೇ ಅವನಿಂದ ಫೋನಿನ ಕರೆ ಬಂದಿತ್ತು.

"ನಿನ್ನೊಂದಿಗೆ ಸ್ವಲ್ಪ ಮಾತನಾಡಬೇಕಿದೆ. ಸಂಜೆ ಮನೆಗೆ ಬರುತ್ತೇನೆ." ಅವನ ದನಿ ತುಂಬಾ ಮೃದುವಾಗಿತ್ತು. ಮನೆಯ ವಿಳಾಸ ಕೊಟ್ಟಳು. ಆದರೆ ಆ ಸಂತಸದಲ್ಲಿ ತನ್ನ ಫೋನ್ ನಂಬರು ಹೇಗೆ ಸಿಕ್ಕಿತು ಎಂದು ಕೇಳುವುದನ್ನೇ ಮರೆತಳು.

ಬಹುಶಃ ತನ್ನನ್ನು ಸಂಪರ್ಕಿಸಲು ತುಂಬಾ ಕಷ್ಟ ಪಟ್ಟಿರಬೇಕು. ನನ್ನ ನೆನಪು ಪದೇ ಪದೇ ಅವನನ್ನು ಕಾಡಿರಬೇಕು. ಅವನ ಮಾತಿನಲ್ಲಿ ಪಶ್ಚಾತ್ತಾಪದ ಛಾಯೆಯಿತ್ತು.

ಮಗಳು ಚಂದನಾಳ ಕರೆಯಿಂದ ಸಂಜನಾಳ ಯೋಚನಾಲಹರಿ ನಿಂತಿತು. ಸಮಯ ನೋಡಿಕೊಂಡಳು. ಮೂರುಗಂಟೆಯಾಗಿತ್ತು. ಆರು ಗಂಟೆಗೆ ಬರುತ್ತೇನೆ ಎಂದಿದ್ದಾನೆ. ಬಂದವನು ಇಲ್ಲಿಯೇ ಉಳಿದು ಕೊಳ್ಳುತ್ತಾನೋ ಅಥವಾ ವಾಪಸ್ಸು ಹೋಗುತ್ತಾನೋ? ಮುಂದಿನ ಜೀವನದ ಬಗ್ಗೆ ಚರ್ಚಿಸಿ ವಾಪಸ್ಸು ಹೋಗಬಹುದು. ಒಂದು ವೇಳೆ ಉಳಿದುಕೊಳ್ಳುತ್ತೇನೆ ಎಂದರೆ ಉಳಿದುಕೊಳ್ಳಲಿ.

ಚಂದನಾಳನ್ನು ಅಂದು ಶಾಲೆಗೆ ಕಳುಹಿಸಿರಲಿಲ್ಲ. ಹಿಂದಿನ ರಾತ್ರಿಯೇ ಮನೆಯನ್ನು ಒಪ್ಪ ಓರಣಗೊಳಿಸಿದಳು. ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡುತ್ತಾ ತನ್ನ ಉದ್ವೇಗ ಶಮನ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಳು. ಮಗಳು ಚಂದನಾಳನ್ನು